◆ **ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದೇಸಿ ಸಂಗೀತದೊಂದಿಗೆ ಪಾಶ್ಚಿಮಾತ್ಯ ಸಂಗೀತವೂ ಮೇಳೈಸಿದವು. ಈ ಹಿನ್ನೆಲೆಯನ್ನು ತಿಳಿಸಿ.**

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದೇಸೀ ಸಂಗೀತದ ಜೊತೆ ಪಾಶ್ಚಿಮಾತ್ಯ ಸಂಗೀತವೂ ಆದರ ವಾದ್ಯಗಳೂ ಸೇರಿಕೊಂಡವು. ಹೀಗೆ ಜಗತ್ತಿನ ಮೂರು ಶ್ರೇಷ್ಠ ಸಂಗೀತ ಶೈಲಿಗಳನ್ನು ಮೈಗೂಡಿಸಿಕೊಂಡ ಈ ಸಂಗೀತಗೋಷ್ಠಿಯನ್ನು ಒಡೆಯರು 1918ರಲ್ಲಿ 'ಕರ್ನಾಟಕ ಬ್ಯಾಂಡ್' ಎಂಬುದಾಗಿ ಪುನರ್ ರಚಿಸಿದರು. ಇದೂ ಸಹ ಭಾರತದ ಮೊಟ್ಟಮೊದಲ ಸಂಗೀತ ವಿಕ್ರಮ ಎನ್ನಬಹುದು. ಇದರ ಮೊದಲನೆಯ ಬ್ಯಾಂಡ್ ಮಾಸ್ತರ್ ವಿದ್ವಾನ್ ವೆಂಕಟಯ್ಯನವರು. ಅಲ್ಲಿಂದೀಚೆಗೆ ನಾಲ್ವಡಿಯವರು ಬ್ಯಾಂಡಿನ ವಾದ್ಯವೈವಿಧ್ಯ ಹಾಗೂ ಸಂಗೀತಶೈಲಿಗಳ ವೈವಿಧ್ಯಗಳನ್ನು ಒಂದುಗೂಡಿಸಿ 'ಇಂಡಿಯನ್ ಆರ್ಕೆಸ್ಟ್ರಾ' ರಚಿಸಿ ಬಿಟ್ಟರು. ಇಲ್ಲಿ ಬೋಧಕರೂ ಸಂಗೀತಗಾರರೂ ಆಗಿ ಲಾಹೋರಿನ ನಜ್ಲೀರ್ ಖಾನ್, ಅಲ್ಲೀಜಾನ್, ವೆಂಕಟರಮಣ್ಯ, ವೆಂಕಟೇಶಯ್ಯ, ಎಂ.ವಿ. ರಾಮಯ್ಯ, ಅಂಜನಪ್ಪ ಮತ್ತು ಸುಬ್ಬಣ್ಣ ಎಂಬ ಪ್ರಖ್ಯಾತ ಸಂಗೀತ ವಿದ್ವಾಂಸರನ್ನು ನೇಮಿಸಿದ್ದರು. ಇವರಲ್ಲದೆ ಜರ್ಮನಿಯ ಲೀಪ್‌ಜಿಗ್ ನಗರದ ಡಿ ಫೈಸ್, ಓಟೋಸ್ಮಿತ್, ಇವರ ಬಳಿಕ ಫೌಕ್ಸ್ ಮತ್ತು ಗೋವಾದಿಂದ ವಲಸೆ ಬಂದ



ಎಂ. ಪೆರೀರಾ ಇಂತಹ ವಿಶ್ವವಿಖ್ಯಾತ ಸಂಗೀತಗಾರರೂ ಬ್ಯಾಂಡ್‌ಮಾಸ್ಟರ್‌ರಾಗಿ ಕಂಗೊಳಿಸಿದರು.

◆ **ಗಾಯನದೊಂದಿಗೆ ವಾದ್ಯಸಂಗೀತವೂ ಕೇಳುಗರಲ್ಲಿ ವಿಶೇಷ ಅನುಭೂತಿ ಸೃಷ್ಟಿಸುತ್ತಿದ್ದವು. ಅದು ಹೇಗೆ?**

ಮೈಸೂರಿನ ಬೆಡಗಿನ ತಂತಿ ವಾದ್ಯಗಳಾದ ವೀಣೆ, ಪಿಟೀಲು, ಸುಷಿರ ವಾದ್ಯ ಕೊಳಲು, ಅವನದ್ಧ ವಾದ್ಯ ಮೃದಂಗಗಳ ಜೊತೆಗೆ ಹಿಂದೂಸ್ತಾನಿ ಶೈಲಿಯ ತಬಲಾ, ಸಿತಾರ್ ವಾದ್ಯಗಳು, ಪಾಶ್ಚಾತ್ಯ ವಾದ್ಯಗಳೆನಿಸಿದ್ದ ಹಾರ್ನ್, ಟ್ರಂಪೆಟ್, ಸ್ಯಾಕ್ಸೊಫೋನ್, ಕ್ಲಾರಿಯೊನೆಟ್, ಕೆಟಲ್‌ಡ್ರಮ್, ಬೇಸ್‌ಡ್ರಮ್ ಮುಂತಾದ ಇಪ್ಪತ್ತು ವಾದ್ಯಗಳೂ, ವಾದ್ಯಗಾರರೂ ಸೇರಿದ್ದ ವಾದ್ಯಗೋಷ್ಠಿ ಪರಂಪರೆಯ ಸಂಗೀತವನ್ನು ಕೇಳುಗರಿಗೆ ಉಣಬಡಿಸುತ್ತಿತ್ತು. ಈ ವಾದ್ಯ ಗೋಷ್ಠಿಯನ್ನು ಕ್ರಮೇಣ ಪ್ಯಾಲೇಸ್ ರೀಡ್‌ಬ್ಯಾಂಡ್, ಕರ್ನಾಟಕ ಸ್ಟ್ರಿಂಗ್‌ಬ್ಯಾಂಡ್, ಹಿಂದೂಸ್ತಾನಿ ಆರ್ಕೆಸ್ಟ್ರಾ ಮತ್ತು ಬ್ಯಾಗ್‌ಪೈಪ್ಸ್ ಎಂದು ವಿಂಗಡಿಸಿ ಮೈಸೂರು ಸಂಸ್ಥಾನದ ಹಲವು ವೈಭವದ ಶುಭ ಸನ್ನಿವೇಶಗಳಲ್ಲಿ ಏರ್ಪಡಿಸಲಾಗುತ್ತಿತ್ತು. ವರ್ಣಮಯ ಸಮವಸ್ತ್ರಗಳನ್ನು ಧರಿಸಿ ಪದಾತಿ, ಅಶ್ವಾರೋಹಿಗಳಾಗಿ ಈ ಬ್ಯಾಂಡ್ ವಿದ್ವಾಂಸರು ವಿಶ್ವವಿಖ್ಯಾತ ದಸರಾ ಮೆರವಣಿಗೆಯಲ್ಲಿ ತಮ್ಮ ನಾದವನ್ನು ಗಗನದವರೆಗೂ ಹೊಮ್ಮಿಸುತ್ತಿದ್ದರು. ದಸರಾ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿಯಲ್ಲಿ ಮೆರೆಯುತ್ತಿದ್ದ ಒಡೆಯರು ಮತ್ತು ತಾಯಿ ಚಾಮುಂಡೇಶ್ವರಿ ಅಮ್ಮನವರ ವೈಭವದ ನಂತರ ಈ ವಾದ್ಯಗೋಷ್ಠಿ, ಸಂಗೀತ ನಾದವನ್ನು ಎಲ್ಲೆಡೆ ಪಸರಿಸುತ್ತಿದ್ದುದು ಯಾರೂ ಮರೆಯುವಂತಿಲ್ಲ.

ಸುಮಧುರವಾದ ಸಂಗೀತ ಕೃತಿಗಳನ್ನು ಕಾಲದಿಂದ ಕಾಲಕ್ಕೆ ಈ ಬ್ಯಾಂಡ್ ಅಳವಡಿಸಿಕೊಳ್ಳುತ್ತಿದೆ. ಇಂದಿಗೂ ದಸರಾ ಮಹೋತ್ಸವದಲ್ಲಿ ರಾಜ ಮಹಾರಾಜರ ಕಾಲದ ಪೊಲೀಸ್ ಬ್ಯಾಂಡ್ ವಾದ್ಯಗೋಷ್ಠಿ ನಡೆಸಿ ಸಹೃದಯರನ್ನು ಸಂತೋಷಗೊಳಿಸುತ್ತಿದೆ. ■

ಅದ್ದೂರಿಯಾಗಿ ನಡೆಯುತ್ತಿದ್ದವು. ಅದೂ ಮಹಾರಾಜರ ಸಮ್ಮುಖದಲ್ಲೇ. ಸಂಗೀತಾಸಕ್ತರು, ಆಹ್ವಾನಿತರು ಅಲ್ಲಿ ನೆರೆಯುತ್ತಿದ್ದರು. ದಸರಾ ಮಾತ್ರವಲ್ಲದೆ ಅರಮನೆಯೊಳಗೆ ನಡೆಯುವ ಮದುವೆ, ವರ್ಧಂತಿ ಸಮಾರಂಭಗಳಲ್ಲೂ ಆಗ ಸಂಗೀತ ಕಛೇರಿಗಳು ಇದ್ದವು' ಎಂದು ನೆನಪಿಸಿಕೊಳ್ಳುತ್ತಾರೆ ಮೈಸೂರಿನಲ್ಲಿರುವ ವೀಣೆ ವಿದ್ವಾನ್ ಆರ್. ವಿಶ್ವೇಶ್ವರನ್.

'ದಸರಾ ಸಂಗೀತ ಹಬ್ಬಕ್ಕೆ ರಾಜ ಮಹಾರಾಜರು ಸ್ಥಳೀಯ ಕಲಾವಿದರಲ್ಲದೆ ಮದ್ರಾಸ್, ತಂಜಾವೂರು, ತಿರುನಲ್ವೇಲಿಗಳಿಂದಲೂ ಹೆಸರಾಂತ ಸಂಗೀತ ದಿಗ್ಗಜರನ್ನು ಕರೆಸಿ ಕಛೇರಿ ಏರ್ಪಾಟು ಮಾಡುತ್ತಿದ್ದರು. ಘಟಾನುಘಟಿ ಸಂಗೀತಗಾರರಾಗಿದ್ದ ಶೆಮ್ಮಂಗುಡಿ, ಚೆಂಬೈ, ಡಿ.ಕೆ. ಪಟ್ಟಮ್ಮಾಳ್, ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಸಂಗೀತ ಕಛೇರಿ ಕೇಳುವ ಸುಯೋಗ ಸಹೃದಯರಿಗೆ ದೊರೆಯುತ್ತಿತ್ತು. ಜೊತೆಗೆ ಮೈಸೂರು ವಾಸುದೇವಾಚಾರ್ಯರು, ಬಿಡಾರಂ ಕೃಷ್ಣಪ್ಪನವರು, ಚಿಕ್ಕರಾಮರಾಯರು, ದೇವೇಂದ್ರಪ್ಪನವರು, ಶಿವರುದ್ರಪ್ಪನವರ ಸಂಗೀತವೂ ಮಹಾರಾಜರ ಸಮ್ಮುಖದಲ್ಲೇ ನಡೆಯುತ್ತಿದ್ದವು. ವಿದ್ವಜ್ಜನರ ಸಂಗೀತ ಕೇಳುವುದೇ ಒಂದು ಹಬ್ಬ' ಎನ್ನುತ್ತಾರೆ ಈ ವಿದ್ವಾಂಸರು.

ವಾಗ್ಗೇಯಕಾರರಾದ ಮೈಸೂರು ವಾಸುದೇವಾಚಾರ್ಯರು, ಮುತ್ತಯ್ಯ ಭಾಗವತರು, ವೀಣೆ ಶೇಷಣ್ಣನವರು, ಬಿಡಾರಂ



ಸ್ವರಮೂರ್ತಿ ವಿ.ಎನ್. ರಾವ್ ವೀಣೆ ಕಛೇರಿ

ಕೃಷ್ಣಪ್ಪನವರಂಥ ವಿದ್ವಾಂಸರ ಕಛೇರಿಗಳು ದರ್ಬಾರ್ ಹಾಲ್‌ನಲ್ಲಿ ವಿಜೃಂಭಿಸುತ್ತಿದ್ದವು. ಅರಮನೆಯ ಕಂಬ ಕಂಬಗಳಲ್ಲೂ ನಾದಲೀಲೆ ಅನುರಣನಗೊಳ್ಳುತ್ತಿತ್ತು. ಕರ್ನಾಟಕ ಸಂಗೀತ ಕೃತಿಗಳು, ಕೀರ್ತನೆಗಳು ಆಲಾಪ, ಶುದ್ಧ ಸಾಹಿತ್ಯ, ಸ್ವರ ಪ್ರಸ್ತಾರ, ಮನೋಧರ್ಮ, ಚಿಟ್ಟೆಸ್ವರ, ನೆರವಲ್‌ಗಳೊಂದಿಗೆ ಸ್ವರಸಂಚಾರ ಮಾಡುತ್ತಿದ್ದವು. ದಸರಾ ಸಂಗೀತ ಸಂಭ್ರಮ ಕಳೆಗಟ್ಟಿ ಅಲ್ಲಿ ಅದ್ಭುತ ಗಂಧರ್ವಲೋಕವೇ ಸೃಷ್ಟಿಯಾಗುತ್ತಿತ್ತು' ಎಂದು ಪುಳಕಗೊಳ್ಳುತ್ತಾರೆ ವಿಶ್ವೇಶ್ವರನ್ ಅವರು.

'ಅರಮನೆಯೊಳಗೆ ಸಂಗೀತ ಕಛೇರಿ ನಡೆಸಿಕೊಡುವುದೆಂದರೆ, ಅದೊಂದು ಪ್ರತಿಷ್ಠೆಯ ಸಂಗತಿಯಾಗಿತ್ತು. ನನ್ನ ಅಣ್ಣಂದಿರಾದ ವಿದ್ವಾನ್ ಚಂದ್ರಶೇಖರಯ್ಯ, ವಿದ್ವಾನ್ ಸೀತಾರಾಮಯ್ಯನವರು ಅಲ್ಲಿ ಕಛೇರಿ